**CC 1049/2022**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 1049/2022

**ಸಿ ಡಬ್ಲ್ಯೂ** -5

**ಪಿ ಡಬ್ಲ್ಯೂ** -4

**ಸಾಕ್ಷಿಯ ಹೆಸರು** - **ಕವಿತಾ**
**ತಾಯಿಯ ಹೆಸರು** - **ಹನುಮಕ್ಕ**
**ವಯಸ್ಸು** - 30 **ವರ್ಷಗಳು**
**ಉದ್ಯೋಗ** - **ಮನೆ ಕೆಲಸ**
**ವಾಸಸ್ಥಳ** - **ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ** 23-07-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಚಾಸಾ-**1** ನನ್ನ ತಂಗಿ, ಚಾಸಾ **-4** ನನ್ನ ತಾಯಿ, ಚಾಸಾ **-6** ನನ್ನ ಅಕ್ಕ, ಚಾಸಾ **-7** ನನ್ನ ಭಾವ.

ನನ್ನ ತಂಗಿಯ ಮದುವೆ ಆರೋಪಿಯೊಂದಿಗೆ ದಿಃ **07-10-2020** ರಂದು ಮಾರಾನಾಥ್ ಚರ್ಚ್ ನಲ್ಲಿ ಆಗಿತ್ತು. ಚಾಸಾ **-1** ರವರು ಮದುವೆಯ ನಂತರ ಆರೋಪಿಯ ಮನೆಗೆ ಹೋಗಿ ಸಂಸಾರ ಮಾಡಿರುತ್ತಾಳೆ. ಸದರಿಯವರು **8** ತಿಂಗಳ ಕಾಲ ಆರೋಪಿಯ ಮನೆಯಲ್ಲಿದ್ದಾಗ ಅವರಿಬ್ಬರ ಮಧ್ಯೆ ಜಗಳಗಳು ಆಗಿರುತ್ತವೆ. ಅವರ ಜಗಳ ಆಡಿದ ಬಗ್ಗೆ ನಮಗೆ ಸುತ್ತ ಮುತ್ತಲಿನ ಜನ ತಿಳಿಸಿದ್ದರು. ಚಾಸಾ **-1** ರವರು ಆರೋಪಿ ಕಿರಿಕಿರಿ ಮಾಡಿದ್ದರಿಂದ, ಹೊಡೆ ಬಡೆ ಮಾಡಿರುವುದರಿಂದ ಮತ್ತು ಗಂಡು ಮಕ್ಕಳನ್ನು ಕರೆದುಕೊಂಡು ಬಂದು ಮನೆಯಲ್ಲಿ ಬಿಟ್ಟಿದ್ದರಿಂದ ಬೇಸತ್ತು ನಮ್ಮ ಮನೆಗೆ ಹಿಂತಿರುಗಿ ಬಂದಿದ್ದರು.

ಆರೋಪಿ ತನ್ನ ತಂದೆ ತಾಯಿಯೊಂದಿಗೆ ಬಂದು ಚಾಸಾ **-1** ರವರೊಂದಿಗೆ ನಮ್ಮ ಮನೆಯ ಹತ್ತಿರವು ಜಗಳ ಮಾಡಿರುತ್ತಾನೆ. ಆತ ಚಾಸಾ **-1** ರವರಿಗೆ

ಕೆಟ್ಟದಾಗಿ ಬೈದು ಜಗಳ ಮಾಡಿದ್ದರಿಂದ ಚಾಸಾ **-1** ರವರು ಆತನ ವಿರುದ್ಧ ದೂರು ನೀಡಿರುತ್ತಾರೆ. ಸದರಿ ದೂರು ನೀಡಿದ ನಂತರವು ಆರೋಪಿ ಮತ್ತು ಆತನ ತಾಯಿ ನಮ್ಮ ಮನೆಯ ಹತ್ತಿರ ಬಂದು ಚಾಸಾ **-1** ರವರಿಗೆ ಕಿರುಕುಳ ನೀಡಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ಪೋಲಿಸರು ಪ್ರಕರಣ ದಾಖಲಿಸಿಕೊಂಡು ಪಂಚನಾಮೆ ಮಾಡಿದ್ದರು. ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ಮದುವೆಯಾದ ನಂತರ ಆರೋಪಿ ಚಾಸಾ -1 ರವರನ್ನು ಚೆನ್ನಾಗಿ ನೋಡಿಕೊಂಡಿಲ್ಲ ಅಂದರೆ ಸರಿ. ಆತ ಮಧ್ಯಪಾನ ಮಾಡಿ ಮನೆಗೆ ಬಂದು ಚಾಸಾ -1 ರವರಿಗೆ ಹೊಡೆ ಬಡೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಅಂದರೆ ಸರಿ. ಆರೋಪಿ ತನ್ನ ಸ್ನೇಹಿತರನ್ನು ಮನೆಗೆ ಕರೆದುಕೊಂಡು ಬಂದು ಅವರೊಂದಿಗೆ ಇರು ಎಂದು ಪೀಡಿಸಿರುತ್ತಾನೆ ಮತ್ತು ಅವರೊಂದಿಗೆ ಇರದಿದ್ದರೆ ಜೀವಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾನೆ ಅಂದರೆ ಸರಿ. ಸೆಪ್ಟೆಂಬರ್ 2021 ರಲ್ಲಿ ನನ್ನ ತಾಯಿ ಚಾಸಾ -1 ರವರನ್ನು ಮನೆಗೆ ವಾಪಸ್ ಕರೆದುಕೊಂಡು ಬಂದಿದ್ದರು ಅಂದರೆ ಸರಿ. ಆಗ ಆರೋಪಿ, ಆತನ ತಾಯಿ ಮತ್ತು ಆತನ ಸ್ನೇಹಿತ ಗುರುರಾಜ ನಮ್ಮ ಮನೆಗೆ ಬಂದು ಚಾಸಾ **-1** ರವರನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ತಿಳಿಸಿದ್ದ ಅಂದರೆ ಸರಿ. ಅದಾದ ನಂತರ ಚಾಸಾ **-1** ಮತ್ತು ಆರೋಪಿ ಹೊಸಪೇಟೆಯಲ್ಲಿ ಬಾಡಿಗೆ ಮನೆಯೊಂದರಲ್ಲಿ ಇದ್ದರು ಅಂದರೆ ಸರಿ. ಸದರಿ ಬಾಡಿಗೆ ಮನೆಯಲ್ಲೂ ಸಹ ಆರೋಪಿ ಕುಡಿದುಕೊಂಡು ಬಂದು

ಚಾಸಾ -1 ರವರೊಂದಿಗೆ ಜಗಳ ಆಡುವುದು ಮತ್ತು ತನ್ನ ಸ್ನೇಹಿತರೊಂದಿಗೆ ಇರು ಎಂದು ಚಾಸಾ -1 ರವರಿಗೆ ಪೀಡಿಸುವುದು ಮಾಡುತ್ತಿದ್ದ ಅಂದರೆ ಸರಿ. ಆ ಬಾಡಿಗೆ ಮನೆಗೆ ಮುಂಗಡ ಹಣವನ್ನು ಸಹ ನನ್ನ ತಾಯಿ ನೀಡಿದ್ದರು ಅಂದರೆ ಸರಿ. ಸದರಿ ಮನೆಯಲ್ಲಿ 1 ತಿಂಗಳು ಸಹ ಸಂಸಾರ ಮಾಡದೇ ನನ್ನ ತಾಯಿಗೆ ಬೈದಾಡಿ, ಸದರಿಯವರು ನೀಡಿದ್ದ ಮುಂಗಡ ಹಣವನ್ನು ಸಹ ತಾನೇ ಬಿಡಿಸಿಕೊಂಡು ಮನೆ ಖಾಲಿ ಮಾಡಿ ಹೋಗಿದ್ದ ಅಂದರೆ ಸರಿ. ಅದಾದ ನಂತರ ಮನೆಯ ಹತ್ತಿರ ಜಗಳ ತೆಗೆದಾಗ ಚಾಸಾ -1 ಮತುತ 4 ರವರನ್ನು ವೇಶ್ಯಾ ವಾಟಿಕೆಗೆ ಕಳುಹಿಸುತ್ತೇನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಅಂದರೆ ಸರಿ.

ದಿಃ **15-02-2022** ರಂದು ಆರೋಪಿ ಚಾಸಾ -1 ರವರಿಗೆ ಬಂದುದದ ಸಂಸಾರ ಮಾಡು ಎಂದು ನೋಟಿಸ್ ನೀಡಿದ್ದ ಅಂದರೆ ಸರಿ. ಸದರಿ ನೋಟಿಸ್ ನೀಡಿದ ನಂತರ ಆರೋಪಿ ಚಾಸಾ -1 ರವರಿಗೆ ಪುನಃ ಪ್ರಾಣ ಬೆದರಿಕೆ ಹಾಕಿದ್ದ ಅಂದರೆ ಸರಿ. ದಿಃ **20-02-2022** ರಂದು ಆರೋಪಿ ನನಗೆ, ಚಾಸಾ -1 ಮತ್ತು 4 ರವರಿಗೆ ಬೈದಿದ್ದ ಅಂದರೆ ಸರಿ. ಆ ಸಂದರ್ಭದಲ್ಲಿ ಚಾಸಾ -8 ರಿಂದ 10 ರವರು ಜಗಳ ನೋಡಿರುತ್ತಾರೆ ಅಂದರೆ ಸರಿ. ದೂರು ನೀಡಿದ ತರುವಾಯ ಆರೋಪಿ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುತ್ತಾನೆ ಎಂದು ಪುನಃ ಚಾಸಾ -1 ರವರು ಪೋಲಸರಿಗೆ ದೂರು ನೀಡಿದ್ದರು ಅಂದರೆ ಸರಿ. ನಾನು ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಆರ್ ಸಿ ಎನ್ ವಕೀಲರಿಂದಃ**

ಚಾಸಾ -1 ನನ್ನ ತಂಗಿ. ಚಾಸಾ -1 ಮತ್ತು ಆರೋಪಿ ಪ್ರೇಮ ವಿವಾಹ ಆಗಿದ್ದರು ಅಂದರೆ ಸರಿ. ಹೊಸಲಿಂಗಾಪುರ ಗ್ರಾಮದಲ್ಲಿ ಆರೋಪಿ ತನ್ನ ಸ್ನೇಹಿತರನ್ನು ಮನೆಗೆ ಕರೆದುಕೊಂಡು ಬಂದಿದ್ದನ್ನು ನಾನು ಖುದ್ದಾಗಿ ಹೋಗಿ

ನೋಡಿರುವುದಿಲ್ಲ. ಚಾಸಾ -1 ರವರಿಗೆ ಆರೋಪಿ ಮಧ್ಯ ಸೇವನೆ ಮಾಡುತ್ತಾನೆ ಎಂದು ಗೊತ್ತಿರಬಹುದು. ಚಾಸಾ -1 ರವರು ಹೊಸಲಿಂಗಾಪುರ ಗ್ರಾಮದಲ್ಲಿ ಆರೋಪಿ ಕಿರುಕುಳ ನೀಡಿರುತ್ತಾನೆ ಎಂದು ಸಂಬಂಧ ಪಟ್ಟ ಪೋಲಿಸ್ ಠಾಣೆಗೆ ದೂರು ನೀಡಿರುತ್ತಾರೆ. ಸದರಿ ದೂರು ದಾಖಲಿಸಿದ ಬಗ್ಗೆ ಈ ಪ್ರಕರಣದಲ್ಲಿ ಚಾಸಾ -1 ರವರು ಮತ್ತು ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ ಅಂದರೆ ನನಗೆ ಗೊತ್ತಿಲ್ಲ.

ಘಟನೆ ಆದ ಬಗ್ಗೆ ನಮಗೆ ವಿಷಯ ತಿಳಿಸಿದ್ದ ಜನರ ಹೆಸರುಗಳು ಮತ್ತು ಅವರ ದೂರವಾಣಿ ಸಂಖ್ಯೆಗಳು ನನಗೆ ಗೊತ್ತಿಲ್ಲ. ಆರೋಪಿ ಚಾಸಾ -1 ರವರಿಗೆ ಸಂಸಾರ ಮಾಡಲು ಬನ್ನಿ ಎಂದು ನೋಟಿಸ್ ನೀಡಿದ್ದರು ಅಂದರೆ ಸರಿ. ಸದರಿ ನೋಟಿಸ್ ಮುಟ್ಟಿದ ನಂತರ ಚಾಸಾ -1 ಆರೋಪಿಯೊಂದಿಗೆ ಸಂಸಾರ ಮಾಡಿಲ್ಲ. ಆರೋಪಿ ನಮ್ಮ ಮನೆಯ ಮುಂದೆ ಯಾವ ಹುಡುಗರನ್ನು ಕರೆದುಕೊಂಡು ಬರುತಿತದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ಹುಡುಗರ ವಿರುದ್ದ ದೂರನ್ನು ದಾಖಲಿಸಿರುವುದಿಲ್ಲ.

ಚಾಸಾ -1 ಇದೇ ನ್ಯಾಯಾಲಯದಲ್ಲಿ ಜೀವನಾಂಶ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಅಂದರೆ ನನಗೆ ಗೊತಿತಲ್ಲ. ಸದರಿ ಜೀವನಾಂಶ ಪ್ರಕರಣದಲ್ಲಿ ಅನುಕೂಲವಾಗಲಿ ಎಂದು ಚಾಸಾ -1 ರವರು ಈ ಪ್ರಕರಣದ ದೂರನ್ನು ನೀಡಿದ್ದರು ಅಂದರೆ ಸರಿಯಲ್ಲ. ಆರೋಪಿ ಚಾಸಾ -1 ರವರಿಗೆ ಯಾವುದೇ ರೀತಿಯಲ್ಲಿ ಕಿರುಕುಳ ನೀಡಿಲ್ಲ, ನಮ್ಮ ಮನೆಯ ಹತ್ತಿರ ಬಂದು ಗಲಾಟೆ ಮಾಡಿಲ್ಲ ಅಂದರೆ ಸರಿಯಲ್ಲ. ಚಾಸಾ -1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತಿತದ್ದೇನೆ ಅಂದರೆ ಸರಿಯಲ್ಲ. ಆರೋಪಿ ನನಗಾಗಲೀ ನನ್ನ ತಾಯಿಗಾಗಲೀ ಚಾಸಾ -1 ರವರಿಗಾಗಲೀ ಯಾವತ್ತೂ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಅಂದರೆ ಸರಿಯಲ್ಲ. ಆರೋಪಿ ಚಾಸಾ -1 ರವರ ಮೇಲೆ ಪ್ರೀತಿಯಿರುವುದರಿಂದ ಆತ ಸಂಸಾರ ಮಾಡಲು ಬನ್ನಿ ಎಂದು ನೋಟಿಸ್

ನೀಡಿದ್ದರು ಸಹ, ಆತನಿಂದ ವಿನಾಕಾರಣ ದೂರ ಉಳಿಯಲು ಚಾಸಾ-1 ರವರು ಇಲ್ಲಸಲ್ಲದ ಆರೋಪಗಳನ್ನು ಮಾಡಿರುತ್ತಾರೆ ಮತ್ತು ಕುಟುಂಬದವರೆಲ್ಲಾ ಅವರಿಗೆ ಸಹಾಯ ಮಾಡುತ್ತಿದ್ದೇವೆ ಅಂದರೆ ಸರಿಯಲ್ಲ. ನಾನು ಆರೋಪಿಯ ವಿರದ್ದ ಪ್ರತ್ಯೇಕವಾಗಿ ಪ್ರಕರಣ ದಾಖಲಿಸಿರುವುದಿಲ್ಲ. ಚಾಸಾ -1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.